


## ಸೀರೆಗೆ ಸೂಕ್ತ

- ಸೀರೆ ಅಥವಾ ಸಾಂಪ್ರದಾಯಿಕ ಉಡುಗೆ ತೊಟ್ಟಾಗ ರೆಸಿನ್ ಸರ, ಮ್ಯಾಚಿಂಗ್ ಉಂಗುರ ಮತ್ತು ಓಲೆ ಧರಿಸಿ ಬೇರೆಲ್ಲ ಹೆಂಗಳೆಯರ ಚಿತ್ತ ನಿಮ್ಮ ಕಡೆಗೆ ಸೆಳೆಯಬಹುದು.
- ಜೀನ್ಸ್ ಉಡುಗೆಯ ಜೊತೆ ರೆಸಿನ್ ಓಲೆ ಚೆನ್ನಾಗಿ ಕಾಣುತ್ತದೆ. ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು.
- ನಾರ್ಮಲ್ ಉಡುಪಿನ ಮೇಲೆಯೂ ನೀವು ಈ ಓಲೆ ಹಾಕಬಹುದು.
- ದಿನವೂ ಇದನ್ನು ಧರಿಸಿದರೂ ಬಣ್ಣ ಹೋಗುವುದಿಲ್ಲವಾದ್ದರಿಂದ ದಿನನಿತ್ಯವೂ ಧರಿಸಬಹುದು.





ಕಳೆದುಕೊಳ್ಳದಿರುವುದು, ತುಕ್ಕು ಹಿಡಿಯದೇ ಇರುವುದು ಇತ್ಯಾದಿ. ಧರಿಸಲು ಆರಾಮದಾಯಕ, ಹಗುರ ಮತ್ತು ಆಕರ್ಷಣೀಯವಾಗಿರುವುದೂ ರೆಸಿನ್ ಆಭರಣಕ್ಕೆ ಬೇಡಿಕೆ ಬರಲು ಕಾರಣ.

ಉತ್ತಮ ಗುಣಮಟ್ಟದ ರೆಸಿನ್ ಕಿವಿಯೋಲೆಗಳು ಹುಡುಗಿಯರ ಮೆಚ್ಚಿನ ಒಡವೆ. ಇದರಲ್ಲಿ ಒಂದೇ ಬಣ್ಣ, ಇಲ್ಲವೇ ಎರಡು ಹಾಗೂ ಬಹು ವರ್ಣಗಳಲ್ಲೂ ಕಿವಿಯೋಲೆಗಳನ್ನು ವಿನ್ಯಾಸಗೊಳಿಸಬಹುದು. ಉಡುಪುಗಳ ಜೊತೆ ಮ್ಯಾಚಿಂಗ್ ಮಾಡಿಕೊಳ್ಳಲು ಸಹ ರೆಸಿನ್ ಒಡವೆ ಸೂಕ್ತವಾದದ್ದು.

‘ಓಲೆ ಒರಟಾಗದಂತೆ, ಏರು ತಗ್ಗು ಬಾರದಂತೆ ರೆಸಿನ್ ಹಾಕುವ ಶ್ರಮ ಸುಲಭದ್ದಲ್ಲ. ಟ್ರಯಲ್ ಅಂಡ್ ಎರರ್ ಮಾಡಿ ಈ ಕಲೆ ಕರಗತ ಮಾಡಿಕೊಳ್ಳಬೇಕಾಗುತ್ತದೆ. ಒಂದು ಕಿವಿಯೋಲೆ ಸೆಟ್ ತಯಾರಿಸಲು ಕನಿಷ್ಠ ಮೂರು ದಿನಗಳ ಕಾಲ ಬೇಕಾಗುತ್ತದೆ. ಸರ ಕೂಡ ಸೇರಿದರೆ ಒಂದು ಸಂಪೂರ್ಣ ಸೆಟ್ ತಯಾರಿಕೆಗೆ ಒಂದು ವಾರ ಕಾಲಾವಧಿ ಬೇಕಾಗುತ್ತದೆ. ಇದು ಕೌಶಲವನ್ನು ಬೇಡುವ ಕಲೆ ಆಗಿದೆ’ ಎಂದು ಹೇಳುತ್ತಾರೆ ರೆಸಿನ್ ಆಭರಣ ತಯಾರಿಕೆಯಲ್ಲಿ ನೈಪುಣ್ಯ ಪಡೆದಿರುವ ಬೆಂಗಳೂರಿನ ಐಶ್ವರ್ಯ.

‘ಕೇವಲ ಸಾಂಪ್ರದಾಯಿಕ ಶೈಲಿಯೊಂದೇ ಅಲ್ಲದೆ ಆಧುನಿಕ ಶೈಲಿಯಲ್ಲಿಯೂ ಆಭರಣ ತಯಾರಿಸುತ್ತೇನೆ. ಇಂಥ ಒಡವೆ ತಯಾರಿಸಲು ಬಹಳ ಶ್ರದ್ಧೆ, ತಾಳ್ಮೆ ಹಾಗೂ ಪರಿಶ್ರಮ ಬೇಕು. ಈಗೀಗ ಇವಕ್ಕೆ ಬೇಡಿಕೆ ಹೆಚ್ಚಿದೆ. ಫ್ಯಾಷನಬಲ್ ಆಗಿಯೂ ಕಾಣುವುದರಿಂದ ಈ ಒಡವೆ ಕಾಲೇಜು ಹುಡುಗಿಯರನ್ನು ಬಹುವಾಗಿ ಸೆಳೆಯುತ್ತಿದೆ’ ಎಂದು ಮಾಹಿತಿ ನೀಡುತ್ತಾರೆ ಅವರು.

‘ರೆಸಿನ್ ಕಿವಿಯೋಲೆ ಮಾಡಿದ ಬಳಿಕ ಬೇರೆ ಬೇರೆ ವಿನ್ಯಾಸಗಳನ್ನು ಅಳವಡಿಸಿಕೊಂಡು ಕೆಲವಷ್ಟು ಓಲೆಗಳನ್ನು, ಜೊತೆಗೆ ತಕ್ಕುದಾದ ಸರಗಳೂ, ನೆಕ್ಲೇಸ್, ಚೋಕರ್‌ಗಳನ್ನು ಕೂಡ ಮಾಡುತ್ತೇನೆ. ಇದು ಹೆಚ್ಚಿನ ಲಾಭ ಗಳಿಸಲು ಸಹಕಾರಿಯಾಗಿದೆ. ರೆಸಿನ್‌ನಲ್ಲಿ ಮೈಸೂರು ಪೇಂಟಿಂಗ್ ಶೈಲಿಯ ಆಭರಣಗಳನ್ನೂ ತಯಾರಿಸುತ್ತೇನೆ. ಇಂಥ ಆಭರಣ ಮಾಡುವವರ ಸಂಖ್ಯೆ ತೀರಾ ಕಡಿಮೆ ಎನ್ನಬಹುದು. ಬೇರೆ ಬೇರೆ ಕಡೆ ಸ್ಟಾಲ್‌ಗಳಲ್ಲಿ ಇಟ್ಟಾಗಲೂ ತುಂಬ ಬೇಡಿಕೆ ಸಿಗುತ್ತದೆ. ಫೇಸ್‌ಬುಕ್‌ನ ‘ಧೃತಿ ಮಹಿಳಾ ಮಾರುಕಟ್ಟೆ’ ಮೂಲಕ ಆನ್‌ಲೈನ್‌ನಲ್ಲೂ ರೆಸಿನ್ ಒಡವೆ ಮಾರಾಟ ಮಾಡುತ್ತೇನೆ. ನನ್ನ ಆಭರಣಗಳ ಮಾರಾಟಕ್ಕೆ ಸಿಕ್ಕಿರುವ ಮನ್ನಣೆಗೆ ‘ಧೃತಿ’ಗೆ ಸದಾ ಚಿರಋಣಿಯಾಗಿರುವೆ’ ಎನ್ನುತ್ತಾರೆ ಐಶ್ವರ್ಯ.

ಸದ್ಯ ಈ ರೀತಿಯ ಟ್ರೆಂಡಿ ಆಭರಣಗಳು ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರಕುತ್ತಿವೆ. 200 ರೂಪಾಯಿಗಳಿಂದ ಹಿಡಿದು ಸಾವಿರ ರೂಪಾಯಿವರೆಗೂ ಬೆಲೆಬಾಳುತ್ತದೆ. ಹಾಗಾದರೆ ಬರೀ ಪ್ಲಾಸ್ಟಿಕ್, ಮೆಟಲ್, ಚಿನ್ನ, ಬೆಳ್ಳಿ ಒಡವೆಗಳನ್ನೇ ಹಾಕಿ ಹಾಕಿ ಯಾಕೆ ಬೇಸರಗೊಳ್ಳುವಿರಿ? ಅಂದದ ಆಕರ್ಷಕ ರೆಸಿನ್ ಒಡವೆಯನ್ನೂ ತೊಟ್ಟು, ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡು ಫ್ಯಾಷನಬಲ್ ಆಗಿ ಮಿಂಚಿ ಮೆರೆಯಬಹುದಲ್ಲವೇ?

ರೆಸಿನ್ ಒಡವೆಗಳಲ್ಲಿ ಸಿಗುವ ಕಿವಿಗೆ ಧರಿಸುವ ಲೋಲಾಕು ಆಕರ್ಷಕವಾಗಿ ಕಾಣುತ್ತದೆ. ಉಡುಪಿಗೆ ಮ್ಯಾಚ್ ಮಾಡಿಕೊಂಡು ಧರಿಸಲು ಸಾಧ್ಯವಿರುವ ಈ ಲೋಲಾಕುಗಳನ್ನು ರಫ್ ಅಂಡ್ ಟಫ್ ಆಗಿಯೂ ಬಳಸಬಹುದು. ರೆಸಿನ್ ಒಡವೆ ಧರಿಸಲು ಬಹಳ ಹಗುರವಾಗಿರುತ್ತದೆ. ಅನ್ಯ ಲೋಹಗಳ ಆಭರಣಗಳನ್ನು ಹಾಕಿದಾಗ ಕೆಲವರಿಗೆ ಚರ್ಮದ ಅಲರ್ಜಿ ಉಂಟಾಗಬಹುದು. ಆದರೆ ರೆಸಿನ್ ಒಡವೆಗಳಿಂದ ಈ ಸಮಸ್ಯೆ ಬಾರದು. ದೈನಂದಿನ ಬಳಕೆಗೆ ಉತ್ತಮ ಆಯ್ಕೆಯಾಗಿರುವ ಇಂಥ ಒಡವೆಗಳನ್ನು ವಿಶೇಷ ಸಂದರ್ಭಗಳಲ್ಲಿ ಉಡುಗೊರೆಯಾಗಿ ಕೊಡಬಹುದು.